SE – 006

**ಮೊದಲನೇ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ಜನವರಿ/ಫೆಬ್ರವರಿ 2026**
**(SEP – 2024) (Repeaters)**
**ಕನ್ನಡ ಭಾಷಾ ಪತ್ರ**
**ವಾಣಿಜ್ಯ ಕನ್ನಡ – 1**

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

I. **ಐದು** ಪ್ರಶ್ನೆಗಳಿಗೆ ಉತ್ತರಿಸಿ. (**100** ಪದಗಳು ಮೀರದಂತೆ) **(5×5=25)**

1) ಭಾಷೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಎದುರಿಸುತ್ತಿರುವ ಸವಾಲುಗಳು ಯಾವುವು ?

2) ತಿರುವಳ್ಳುವರ್ ಹಾಗೂ ಶಿವಾಜಿ ಪ್ರತಿಮೆಗಳ ಪ್ರಕರಣದಿಂದ ನಾವು ಕಲಿಯಬಹುದಾದ ಪಾಠಗಳೇನು ?

3) ಭಾಷೆ ಹಾಗೂ ಬರವಣಿಗೆಯ ಬೆಳವಣಿಗೆಗೆ ಕಂಪ್ಯೂಟರ್ ಹೇಗೆ ಸಹಾಯಕವಾಗಿದೆ ?

4) ಅಸಹಕಾರ ಚಳವಳಿ ಕುರಿತು ಗಾಂಧೀಜಿ ಹಾಗೂ ಟ್ಯಾಗೋರರ ಅಭಿಪ್ರಾಯಗಳೇನು ?

5) ಮನೋನಿಯಂತ್ರಣ ಕುರಿತು ಪತ್ರದ ಹಿನ್ನೆಲೆಯಲ್ಲಿ ವಿವರಿಸಿ.

6) ಮೀಸಲಾತಿಗೂ ಜಾಗತೀಕರಣಕ್ಕೂ ಇರುವ ಸಂಬಂಧ ಕುರಿತು ಬರೆಯಿರಿ.

7) ನಿಯೋಲಿಬರಲ್ ವಾದವನ್ನು ಸಂಕ್ಷಿಪ್ತವಾಗಿ ವಿವರಿಸಿ.

OM SAI COLLEGE
No.............
Dt.............
LIBRARY

II. **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. (**200** ಪದಗಳು ಮೀರದಂತೆ) **(3×10=30)**

1) ಭಾಷಾ ಸಾಮರಸ್ಯವನ್ನು 'ಕಾಣಿಕೆ' ಪದ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

2) ಝೆನ್ ಕಥೆಗಳಲ್ಲಿ ಕಂಡುಬರುವ ಸ್ವಾರಸ್ಯವನ್ನು ತಿಳಿಸಿ.

3) ಸ್ವ-ಸಹಾಯ ಗುಂಪುಗಳು ಹೇಗೆ ಕಾರ್ಯನಿರ್ವಹಿಸುತ್ತವೆ ? ವಿವರಿಸಿ.

4) ಸ್ವಂತ ದುಡಿಮೆಗೆ ಸಹಾಯಕವಾಗುವ ರೀಟೇಲ್ ವ್ಯಾಪಾರಗಳನ್ನು ಪರಿಚಯಿಸಿ.

III. ಕೆಳಗಿನ ಗದ್ಯ ಭಾಗವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಬರೆದು ಸೂಕ್ತ ಶೀರ್ಷಿಕೆ ನೀಡಿರಿ. **(1×5=5)**

ಕುದುರೆಮುಖದ ಗಣಿಗಾರಿಕೆಯಿಂದ ಚಿನ್ನ ಸಿಗುವುದಾದರೂ ನಮಗದು ಬೇಕಾಗಿಲ್ಲ ಎಂದು ನಾವು ತಿಳಿದುಕೊಂಡು ವರ್ತಿಸಬೇಕು. ನಿತ್ಯ ದುಡಿಯುವ ಒಬ್ಬ ಮನುಷ್ಯ ಮತ್ತೆ ನಾಳೆ ದುಡಿಯಲು ಬೇಕಾಗುವ ಆಹಾರವನ್ನು ಸಂಪಾದಿಸುತ್ತಾನೆ. ಹೀಗೆ ದುಡಿಮೆಯಿಂದ ಶಕ್ತಿಯನ್ನು ಪಡೆದು ಅದನ್ನು ದುಡಿಮೆಗೇ ವಿನಿಯೋಗಿಸುತ್ತಾ ಇರುವ ನಮ್ಮ ಅಸಂಖ್ಯ ದುಡಿಮೆಗಾರರು ಪರಾಗಸ್ಪರ್ಶಕ್ಕೆ ಕಾದಿರುವ ಹೂವಿನಂತಿರುತ್ತಾರೆ. ಯಾವುದೇ ದುಂಬಿ ಆಕಸ್ಮಿಕವಾಗಿ ತನ್ನನ್ನು ಬಂದು ಮುಟ್ಟೀತೆನ್ನುವ ಭರವಸೆಯಲ್ಲಿ, ಗಾಳಿಯಲ್ಲಿ ಅಲ್ಲಾಡುತ್ತಾ ಇರುವ ಹೂವಿನ ಹಾಗೆ ಇದ್ದು ಬಿಡುತ್ತಾರೆ. ಯಾವುದೇ ದೈವ ತಮ್ಮನ್ನು ಬಂದು ಮುಟ್ಟೀತೆನ್ನುವ ಭರವಸೆಯಲ್ಲಿ,

P.T.O.

ಹರಕೆಯಲ್ಲಿ ಬಾಳುತ್ತಾ ನದಿಗಳ ಸಂಗಮದಲ್ಲಿ ಸಹಸ್ರ ಸಂಖ್ಯೆಯಲ್ಲಿ ಮೀಯುತ್ತಾ , ಕಾಲ್ನಡಿಗೆಯಲ್ಲಿ ಯಾತ್ರೆ ಮಾಡುತ್ತಾ ಇರುವ ಅಪಾರ ಜನಕೋಟಿ ನಮ್ಮ ದಿನನಿತ್ಯದ ಬದುಕನ್ನು ಅರ್ಥಪೂರ್ಣವನ್ನಾಗಿ ಮಾಡಬಲ್ಲರು. ದೇವರು ಇದ್ದಾನೋ ಇಲ್ಲವೋ ತಿಳಿಯದು. ಪ್ರಾಯಶಃ ಅವನನ್ನು ಮುಟ್ಟುವ ಭರವಸೆಯಲ್ಲಿ ಎಲ್ಲರೂ ಕೊನೆಗೆ ಸಾಯುವುದೇನೋ ? ಹೀಗೆ ನಿತ್ಯದ ದುಡಿಮೆಯ ಕಾಯಕ ಮತ್ತು ಅಗೋಚರವಾದದ್ದರ ಭರವಸೆಯ ಈ ಜೀವನದಲ್ಲಿ ಭಾರತದ ಅಪಾರ ಜನಸಂಖ್ಯೆಗೆ ನಿಜವಾದ ಸುಖ ಸಿಗುವುದು ಮಕ್ಕಳ ಲಾಲನೆ, ಪಾಲನೆ, ಹಬ್ಬ ಹರಿದಿನಗಳ ಊಟ, ಕೊಂಚ ಬಿಡುವಿದ್ದಾಗ ನಡೆಯುವ ಕಾಡು ಹರಟೆ ಇವುಗಳಲ್ಲೆ.

IV. ಸಂಕ್ಷೇಪಿಸಿದ ಭಾಗ ಆಧರಿಸಿ **ಎರಡು** ಪ್ರಶ್ನೆಗಳನ್ನು ರೂಪಿಸಿ. **(2×1=2)**

V. ಇವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ. **(2×2=4)**

1) ಹುಡುಕಾಟ

2) ಸಾಮರ್ಥ್ಯ

3) ಸಂತಸ

4) ಜನಸಂಖ್ಯೆ.

VI. ಕಾಲೇಜಿನ ಶುಲ್ಕದಲ್ಲಿ ವಿನಾಯಿತಿ ಕೋರಿ ಪ್ರಾಂಶುಪಾಲರಿಗೆ **ಒಂದು** ಪತ್ರ ಬರೆಯಿರಿ. **(1×5=5)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ. **(4×1=4)**

1) ಕೆಳೆಯ

2) ಮೌಢ್ಯ

3) ಹುತಾತ್ಮ

4) ಕೋಡು

5) ತೆಂಕಣ

6) ನೊಸಲು.

OM SAI COLLEGE
No.....................
Dt.....................
LIBRARY

VIII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. (**ಎಲ್ಲಾ ಐದು** ಪ್ರಶ್ನೆಗಳಿಗೆ ಉತ್ತರಿಸಿ) **(5×1=5)**

1) ರವೀಂದ್ರನಾಥ ಟ್ಯಾಗೋರರು ಸ್ಥಾಪಿಸಿದ ಶಿಕ್ಷಣ ಸಂಸ್ಥೆ

ಅ) ಚೇತನ ಆ) ಅನಿಕೇತನ

ಇ) ಶಾಂತಿನಿಕೇತನ ಈ) ಕಲಾನಿಕೇತನ

2) 'ಭಾಷೆ' ಎಂದರೆ ರಷ್ಯನ್ ಭಾಷೆಯಲ್ಲಿ

ಅ) ಮಾತು ಆ) ಸಮಾಜ ಇ) ಜನ ಈ) ನಂಬಿಕೆ

3) 'ಸಮಕಾಲೀನ ಸವಾಲುಗಳು' ಲೇಖನವನ್ನು ಬರೆದವರು

ಅ) ಬಿ.ಎಂ.ಶ್ರೀ. ಆ) ಪೂರ್ಣಚಂದ್ರ ತೇಜಸ್ವಿ

ಇ) ಬೆಸಗರಹಳ್ಳಿ ರಾಮಣ್ಣ ಈ) ಸಿದ್ದು ತೊರವಟ್

4) 'ಲೆಟ್ ಅವರ್ ಚಿಲ್ಡ್ರನ್ ಗೊ' ಪುಸ್ತಕವನ್ನು ಬರೆದವರು

ಅ) ಪ್ಯಾಟ್ರಿಕ್ ಆ) ದಾಸ್ತಾವೆಸ್ಕಿ

ಇ) ವಿಲಿಯಂ ವರ್ಡ್ಸ್‌ವರ್ತ್ ಈ) ಲಾರೆನ್ಸ್

5) ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಮೊದಲ ಸಮ್ಮೇಳನ ನಡೆಸಿದ ವರ್ಷ

ಅ) 1911 ಆ) 1947 ಇ) 1896 ಈ) 1986

---

OM SAI COLLEGE
No.....................
Dt.....................
LIBRARY